ಮರಿಯೆಂದು...' ಗೌಡನಿಗೂ ಹಾಗೂ ವ್ಯಾಪಾರದವರಿಗೂ, ಮೌಲಾನ ಸಾಬ್‌ಗೂ ಕಡ್ಡಿ ಮುರಿದಂಗೆ ಹೇಳಿದ್ದುಂಟು. ಗೌಡನು ದುರ್ಗವ್ವನ ಮೇಲಿನ ಭಕ್ತಿಯಿಂದ ಬಾಲಮುರಿದ ನಾಯಿಯಂತೆ, ತನ್ನ ಗತ್ತನ್ನು ಸುಮ್ಮನೇ ಹೆಗಲಮೇಲಿನ ವಲ್ಲೆಯನ್ನು ಸರಿಮಾಡ್ತ ಹೊರಟು ಹೋಗಿದ್ದು. ಅಂತೂ ಇಂತೂ ಹಬ್ಬದ ಸಡಗರ ಊರಲ್ಲಿ ಮತ್ತೆ ಮರುಕಳಿಸಿತು, ಲಗಾಮು ಇಲ್ಲದ ಕುದುರೆಯಂತೆ ವಯಸ್ಸಿನ ಹುಡ್ರು ಎದೇಲಿ ಸಂಭ್ರಮ ಸಡಗರದ ವಾತಾವರಣ ಮೂಡಿತು. ಸಂಕವ್ವನ ಮನಿಗೆ ಮುದ್ದೇಪುರದ ತನ್ನ ಮಲತಾಯಿ ಸೇರಿದಂತೆ, ನೆಂಟರು- ಬಂಟರು ಬಂದು ಮನೆ ತುಂಬಿದ್ರು. ಸಂಕವ್ವನಿಗೆ ಒಂದು ಕಡೆ ಸಂತೋಷ, ಮತ್ತೊಂದೆಡೆ ದಿಗಿಲು, ಕರಿಯ ದಿನಂಪ್ರತಿಯಾಗಿ ಪೂಜೆ ಮಾಡಿ ಕೊಂಡು ದುರ್ಗವ್ವನ ಚರಗದ ಬುಟ್ಟಿ ಹೊರಲು ಸಿದ್ಧನಾದ. ಬಂದ ಸಂಬಂಧಿಕರೆಲ್ಲರು ಕರಿಯನನ್ನೇ ಉಪಚರಿಸುವುದು ಹಾಗೂ 'ಕರಿಯ ಮೊದಲು ಕುಡ್ದು ಮನಿಮಠ ಬಿಟ್ಟು ಕಾಲಿಗೆ ರೆಕ್ಕೆಕಟ್ಟಿಕೊಂಡು ಊರೂರು ಅಲಿತಿದ್ದ. ಇವಾಗ ಎಷ್ಟೊಂದು ಬುದ್ಧಿವಂತ ಆಗೋಣೆ ನೋಡ್ರೆ' ಎಂದು ಊರಿನ ಜನರಿಂದ ಹಿಡ್ದು, ಮನಿಗೆ ಬಂದ ಸಂಬಂಧಿಕರು ಸೇರಿ ಹೊಗಳುತ್ತಿದ್ರು. ಇದನ್ನು ಕೇಳಿದ ಕರಿಯ ಮನಸ್ಸಿನಲ್ಲಿ 'ನಾನು ಅಂದು ಗೌಡ್ರ ಬಾವಿಗೆ ಬೀಳದೆಯಿದ್ದಿದ್ರೇ, ನನಗೆ ಈ ಬುದ್ಧಿನೇ ಬರುತ್ತಿರಲಿಲ್ಲಾ. ಗೌಡ್ರ ಗಂಗಮ್ಮನ ಬಾವಿನೇ ನನ್ನ ಇಷ್ಟೇಲ್ಲಾ ಬದಲಾವಣೆಗೆ ಕಾರಣ' ಎಂದುಕೊಂಡು ಬಂದವರನ್ನು ಮರ್ಯಾದಸ್ಥನಾಗಿ ಉಪಚರಿಸುತ್ತಿದ್ದನ್ನು ನೋಡಿ, ಸಂಕವ್ವಳ ತಂದೆ 'ಇಷ್ಟೇ ಸಾಕು ನನ್ನ ಮಗಳ್ಗೆ ಆಸರೆಕೆ ಒಬ್ಬ ಒಳ್ಳೆ ಅಳಿಯ ಸಿಕ್ಕ, ಇನ್ನೂ ನಾ ಸತ್ತರು ಚಿಂತಿಲ್ಲ' ಅಂತ ಹಾಲು ಕುಡಿದಷ್ಟು ಸಂತೋಷ ಪಟ್ಟ.

ಊರಿನ ಹಿರಿಯರೆಲ್ಲರು ಸೇರಿ ಹೊಲೇರ ಕರಿಯನ ಮನೆಯ ಹತ್ತಿರ ಬಂದ್ರೂ, ಅವನಿಗೆ ದುರ್ಗವ್ವನ ಪೂಜಾರಿಯಿಂದ ಲಿಂಗಧಾರಣೆ ಮಾಡಿಸಿ, ಕರಿಯ ಮತ್ತು ಸಂಕವ್ವನನ್ನು ಜೊತೆಗೂಡಿಸಿಯೇ ಮನೆಯಲ್ಲಿರುವ ಚರಗದ ಬುಟ್ಟಿಗೆ ಪೂಜೆ ಮಾಡಿಸಿದರು. ಅಲ್ಲಿರುವ ನಾಲ್ಕೈದು ಜನ ಮುತ್ತೈದೆಯರು ಸಂಕವ್ವನ ಬಳೆ, ಮೂಗುತಿ, ಹೂವನ್ನೆಲ್ಲಾ ತೆಗೆದು ಬಿಳಿ ಸೀರೆ ಉಡಿಸಿ, ಹೂವಿನಹಾರ ಕೊರಳಿಗೆ ಹಾಕಿ, ಮುಡಿಯನ್ನು ಮಡಚ್ಚಟ್ಟಿಗೆ ಕಟ್ಟಿ, ಇಬ್ಬರನ್ನು ಮೆರವಣಿಗೆಯ ಮೂಲಕ ಕರೆದುಕೊಂಡು ಬಂದು, ಊರಿನ ಹೆಬ್ಬಾಗಿಲಲ್ಲಿರುವ ಬುಡ್ಡೇ ಕಲ್ಲಿನ ಹತ್ತಿರ ನಿಲ್ಲಿಸಿದ್ರು. ಸಂಕವ್ವ ಒಂಟಿಕಾಲಿನಲ್ಲಿ ನಿಂತು ದುರ್ಗವ್ವನ ಧ್ಯಾನವನ್ನು ಮಾಡುತ್ತಾಳೆ. ಕರಿಯ ಗುಡಿಯ ಮುಂದೆ ಹೋಗಿ ದುರ್ಗವ್ವನಿಗೆ ಕೈ ಮುಗಿದು 'ಅವ್ವ ತಾಯಿ ನನ್ನ ಜಾತಿಯೋನು, ನಿನ್ನ ನಂಬಿಸಿ ಮದುವೆಯಾದ ಅಂತೇಳಿ, ನನ್ನ ಕುಲದ ಮ್ಯಾಲೇ ಸೇಡು ತೀರಿಸಿಕೊಂಡಿದ್ದು ಸಾಕು, ನಿನ್ನ ಸೇವೆ ಮಾಡ್ತ ಮಾಡ್ತನೆ ನನ್ನ ತಂದೆನಾ ಬಲಿ ತಗೊಂಡೆ,. ಆದರೆ, ನನ್ನ ಪ್ರಾಣ ನೀ ಅವತ್ತು ಉಳಿಸಿದಿ, ಇವತ್ತು ಈ ನಿನ್ನ ಮಡಿಲ ಮಗಿ ಅಂದುಕೊಂಡು ನನ್ನ ಪ್ರಾಣ ನಿನ್ನ ಕೈಲಿಟ್ಟು ನಿನ್ನ ಊರಿಗೆ ಚರಗ ಚೆಲ್ಲೋಕೆ ಹೋಗುತ್ತೇನೆ, ತಿರುಗಿ ಬರೋದಾದರೆ ಬಲಗಡೆ ಹೂವ ಕೊಡೆ ನನ್ನ ತಾಯಿ' ಎಂದು ಕೈ ಮುಗಿದು ನಿಂತ ಕರಿಯನಿಗೆ ದುರ್ಗವ್ವನ ಮೂರ್ತಿಯಿಂದ ಪೂಜಾರಿ ಬಲಗಡೆಯ ಹೂವನ್ನೇ ತಂದು ಕೈಗಿಟ್ಟನು. ಅಲ್ಲಿಂದ ಬರೋವತ್ತಿಗೆ ಊರಿನ ಬಾಗಿಲಲ್ಲಿ ಚರಗದ ಬುಟ್ಟಿಯನ್ನು ಯಜಮಾನರು ಪೂಜೆ ಮಾಡಿ, ಅದಕ್ಕೆ ಜೀವಕಾಳ ತುಂಬಿ ಸಿದ್ಧತೆ ಮಾಡಿದ್ದರು. ಕರಿಯನಿಗೆ ನಾಲ್ಕೈದು ಜನ ಹೊರಿಸಿದ್ರು, ಚರಗ ಬುಟ್ಟಿ ಹೊತ್ತ ಕರಿಯನು ದುರ್ಗಿಯೇ ಮೈಮೇಲೆ ಬಂದು ಬಿಡ್ತೇನೋ ಅನ್ನುವ ಹಾಗೆ, ಉಸಿರು ಗಟ್ಟಿಯಾಗಿಡಿದು ಕೇಕೆ ಹಾಕಿದ್ದೊಂದೇ ನಾಲ್ಕು ಜನರನ್ನು ತನ್ನ ಬಲದಿಂದ ಬಿಸಾಡಿ ಬುಟ್ಟಿ ಹೊತ್ತು ಓಡಲು ಶುರುಮಾಡಿದ. ಅವನ ಹಿಂದೆ ಎದ್ದುಬಿದ್ದು ಆ ನಾಲ್ಕು ಜನರು ಓಡಿಹೋಗಿ ಬುಟ್ಟಿಯನ್ನು ಹಿಡಿದು ಊರಿಗೆ ಚರಗ ಚೆಲ್ಲುತ್ತ ಅವನಂತೆ ಓಡಿದ್ರು. ಅಂತೂ ಇಂತೂ ಚರಗ ಚೆಲ್ಲಿ ದುರ್ಗವ್ವನ ಗುಡಿಗೆ ಬಂದೇ ಬಿಟ್ಟರೂ ಒಂಟಿಕಾಲಿನಲ್ಲಿ ನಿಂತ ಸಂಕವ್ವನಿಗೆ ಮೊದಲು ಕಂಡದ್ದೇ ತನ್ನ ಗಂಡನ ಮೈ ಮೇಲೆ ದುರ್ಗಿ ಬಂದಿದ್ದಾಳೆಂದು. ಪಕ್ಕದಲ್ಲಿ ನಿಂತ ನಾಲ್ಕೈದು ಮುತ್ತೈದೆಯರು 'ಕೊನೆಗೂ ಸಂಕವ್ವನಿಗೆ ಆ ದುರ್ಗವ್ವ ಮುತ್ತೈದೆ ಭಾಗ್ಯ ಮರಳಿಕೊಟ್ಟು ನೋಡ್ರೇ' ಎಂದು ಹೇಳುತ್ತಿದ್ದಂತೆ. ಅಲ್ಲೇ ಇದ್ದ